ಬೆವಿಕಂ
BESCOM

# ಬೆಸ್ಕಾಂ ಸ್ನೇಹಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಗೃಹಪತ್ರಿಕೆ

ಸಂಪುಟ-6, ಸಂಚಿಕೆ-3 | ತ್ರೈಮಾಸಿಕ, ಜುಲೈ - ಸೆಪ್ಟೆಂಬರ್ 2019 | ಪುಟಗಳು-12



## ದಿನಾಂಕ 4.5.2019 ರಂದು ಬೆವಿಕಂ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಬೆಂಗಳೂರಿನ ಅಂಬೇಡ್ಕರ್ ಭವನ ಸಭಾಂಗಣದಲ್ಲಿ ಆಚರಿಸಲಾಯಿತು


















# Message from Managing Director



As we are all aware of the damages caused to our BESCOM assets due to wind and rain in the recent past, I advise officers and staff of BESCOM to be well prepared to handle the Monsoon with proper action plan and preventive maintenance works.

Also, in order to avoid the susceptibility of damages caused to overhead lines & assets in Bangalore City during rainfall and storm, BESCOM has taken up a project worth Rs. 5300 crores to convert HT and LT overhead lines to underground or air bunch cables in phased manner in the coming 3 years. This year works worth Rs. 1870 crores have been entrusted to selected agencies through tender process. This will not only ensure reliable power supply in city but also the instances of disruption of power due to calamities will be curtailed substantially.

Safety being the first priority, BESCOM has taken up several Safety awareness Campaigns in the interest of public safety through various modes like Television, Radio, Newspaper, Cinema halls etc.

At the same time, our employee's safety is equally important. I suggest to all the officers and staff to carry out the works with utmost care and safety precautionary measures.

I would like to inform all my staff that BESCOM has entered into a MoU with

(i) International Copper Association India (ICAI) & Power Research and Development Consultants Private Limited (PRDC) on 25.06.2019. Studies will be carried out on the existing selected feeders to derive insights for improving the quality and efficiency of the power fed to the consumers.

(ii) Tata Power Delhi Distribution System Limited in order to facilitate the implementation of emerging technologies in the arena of power distribution to provide reliable and quality power supply to the consumer at an affordable cost.

Reiterating the importance of Safety, I would like to wish everyone a very happy Gowri and Ganesha Festival.

**C. Shikha**
Managing Director
BESCOM

# ಸಂಪಾದಕೀಯ

ಆತ್ಮೀಯರೆ,

ಸುಡು ಬೇಸಿಗೆ ಕಾಲವನ್ನು ಮುಗಿಸಿ ಮಳೆಗಾಲದತ್ತ ನಾವು ಹೊರಳುತ್ತಿದ್ದೇವೆ. ಹಿಂದೆ ಮೇ ತಿಂಗಳಿನಲ್ಲಿ ಬೇಸಿಗೆ ಮಳೆ ಸಾಕಷ್ಟು ಪ್ರಮಾಣದಲ್ಲಿ ಬೀಳುತ್ತಿತ್ತು. ಅದೇ ರೀತಿ ಮುಂಗಾರು ಮಳೆ ಕೂಡ ಜೂನ್ ತಿಂಗಳಿಂದಲೇ ಆರಂಭವಾಗುತ್ತಿತ್ತು.

ಆದರೆ ಈಗ ಹವಾಮಾನದಲ್ಲಿ ಸಾಕಷ್ಟು ಬದಲಾವಣೆಗಳಾಗಿರುವುದರಿಂದ ಏಪ್ರಿಲ್–ಮೇ ತಿಂಗಳಿನಲ್ಲಿ ಗುಡುಗು–ಮಿಂಚು ಸಹಿತ ಬೀಳುತ್ತಿದ್ದ ಬೇಸಿಗೆ ಮಳೆ ಪ್ರಮಾಣ ಕಡಿಮೆಯಾಗಿದೆ. ಈ ಮಳೆ ಹೆಚ್ಚಾಗಿ ಬಿದ್ದರೆ ಸಹಜವಾಗಿಯೇ ಕೃಷಿ ಪಂಪ್ ಸೆಟ್‌ಗಳಿಗೆ ಬಳಸುತ್ತಿದ್ದ ವಿದ್ಯುತ್ ಪ್ರಮಾಣ ಕೂಡ ಕಡಿಮೆಯಾಗುತ್ತಿತ್ತು.

ಆದರೆ ಈ ಬಾರಿ ಬಿದ್ದ ಅಲ್ಪಸ್ವಲ್ಪ ಮಳೆಯ ಆರ್ಭಟದಿಂದ ಬೆಂಗಳೂರು ಮಹಾನಗರಕ್ಷೇತ್ರ ವ್ಯಾಪ್ತಿಯಲ್ಲಿ ಮರಗಳು/ಮರದ ಕೊಂಬೆಗಳು ವಿದ್ಯುತ್ ತಂತಿ ಹಾಗೂ ಕಂಬಗಳ ಮೇಲೆ ಬಿದ್ದು ಸಂಭವಿಸಿರುವ ಹಾನಿಗಳೇ ಹೆಚ್ಚಾಗಿ ವಿದ್ಯುತ್ ಸರಬರಾಜಿನಲ್ಲಿ ಸಾಕಷ್ಟು ವ್ಯತ್ಯಯವಾಗಿರುತ್ತದೆ.

ಅಂತಹ ಸಂದರ್ಭದಲ್ಲಿ ಬೆವಿಕಂ ಸಿಬ್ಬಂದಿ ಹಾಗೂ ಅಧಿಕಾರವರ್ಗ ಚಾಕಚಕ್ಯತೆಯಿಂದ ಕಾರ್ಯ ನಿರ್ವಹಿಸಿ ಅವಘಡದಿಂದ ಆದ ವಿದ್ಯುತ್ ವ್ಯತ್ಯಯವನ್ನು ಸರಿಪಡಿಸಿ ಸುಗಮ ವಿದ್ಯುತ್ ಪೂರೈಕೆಗೆ ಅನುವು ಮಾಡಿಕೊಟ್ಟಿರುವುದು ಶ್ಲಾಘನೀಯವಾಗಿದೆ.

ಜೂನ್‌ನಲ್ಲಿ ಮಳೆ ಬಾರದಿದ್ದರೂ ಜುಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿ ಮಳೆಯ ಪ್ರಮಾಣ ಹೆಚ್ಚಾಗುವ ಸಾಧ್ಯತೆ ಇರುತ್ತದೆ.

ಹವಾಮಾನ ಇಲಾಖೆಯವರು ನೀಡುವ ಮುನ್ಸೂಚನೆಯೂ ಅದೇ ಆಗಿದೆ. ಮಳೆಗಾಲ ಎಂದರೆ ವಿದ್ಯುತ್ ಇಲಾಖೆಯವರಿಗೆ ಸವಾಲಿನ ಸಮಯ. ಮೇಲಿಂದ ಮೇಲೆ ಅವಘಡಗಳು/ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯಗಳು ಸಂಭವವಿಸಿದರೆ ಸಮರೋಪಾದಿಯಲ್ಲಿ ಅವುಗಳನ್ನು ಎದುರಿಸಿ ಗ್ರಾಹಕರಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಸುವ ಜವಾಬ್ದಾರಿ ನಮ್ಮ ಮೇಲೆ ಇದೆ.

ಗ್ರಾಹಕರಿಂದ ದೂರುಗಳು ಬಂದಾಗ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಬೇಕು. ಮಳೆಗಾಲದಲ್ಲಿ ಕೃಷಿ ಪಂಪ್ ಸೆಟ್‌ಗಳಿಗೆ ಹೆಚ್ಚಿನ ವಿದ್ಯುತ್‌ಅಗತ್ಯ ಬೀಳುವುದಿಲ್ಲ. ಆದರೆ ಆಧುನಿಕ ಜಗತ್ತಿನಲ್ಲಿ ನಿತ್ಯದ ಬದುಕಿಗಾಗಿ ಪ್ರತಿಯೊಬ್ಬರೂ ವಿದ್ಯುತ್ ಅನ್ನು ಅವಲಂಬಿಸಿದ್ದಾರೆ. ಹಾಗಾಗಿ ಗ್ರಾಹಕರ ಸಮಸ್ಯೆಗಳಿಗೇನೂ ಕೊರತೆ ಇಲ್ಲ. ಅವುಗಳಿಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ನಾವು ಕಾರ್ಯೋನ್ಮುಖರಾಗಬೇಕು.

ಇತ್ತೀಚಿನ ದಿನಗಳಲ್ಲಿ ವಿದ್ಯುತ್ ಅವಘಡಗಳಿಂದ ಮಕ್ಕಳು ಸೇರಿದಂತೆ ಹತ್ತಾರು ಮಂದಿ ಜೀವ ಕಳೆದುಕೊಂಡಿದ್ದಾರೆ.

ಈ ನಿಟ್ಟಿನಲ್ಲಿ ಜನರಲ್ಲಿ ಅರಿವು ಮೂಡಿಸಲು ಸುರಕ್ಷಾ ಕ್ರಮಗಳ ಬಗ್ಗೆ 'ಬೆಸ್ಕಾಂ' ಸಾಕಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತದೆ.

ನಮ್ಮ ಕ್ಷೇತ್ರ ಸಿಬ್ಬಂದಿ ಪ್ರತಿ ಮನೆ ಮನೆಗೆ ತೆರಳಿ ಅಗತ್ಯ ಮಾಹಿತಿ ಇರುವ ಕರ ಪತ್ರಗಳನ್ನು ಹಂಚುತ್ತಿದ್ದಾರೆ. ರೇಡಿಯೊ, ಟಿ.ವಿ, ವೃತ್ತಪತ್ರಿಕೆಗಳು ಹಾಗೂ ಸಿನಿಮಾ ಚಿತ್ರಮಂದಿರಗಳು ಮತ್ತಿತರ ಮಾಧ್ಯಮಗಳ ಮೂಲಕವೂ ವಿದ್ಯುತ್ ಸುರಕ್ಷತೆ ಕುರಿತಂತೆ ಏನು ಮಾಡಬೇಕು ಮತ್ತು ಯಾವುದನ್ನು ಮಾಡಬಾರದು ಎಂಬುದರ ಬಗ್ಗೆ ತಿಳಿವಳಿಕೆ ನೀಡಲಾಗುತ್ತಿದೆ.

ಅಲ್ಲದೆ, ಗ್ರಾಹಕರ ಸಮಸ್ಯೆಗಳಿಗೆ ತ್ವರಿತವಾಗಿ ನೆರವಾಗುವ ನಿಟ್ಟಿನಲ್ಲಿ ಬೆವಿಕಂ ಸಹಾಯವಾಣಿಯ (ಹೆಲ್ಪ್ ಲೈನ್) ಸಾಮರ್ಥ್ಯವನ್ನು 45 ಆಸನಗಳಿಂದ 60 ಆಸನಗಳವರೆಗೆ ಉನ್ನತೀಕರಿಸಿ ಹೆಚ್ಚು ಗ್ರಾಹಕರ ಕರೆಗಳನ್ನು ಸ್ವೀಕರಿಸಲು ಅನುಕೂಲ ಮಾಡಿಕೊಡಲಾಗಿದೆ.

ತಮಗೆಲ್ಲರಿಗೂ 73ನೇ ಸ್ವಾತಂತ್ರ್ಯ ದಿನಾಚರಣೆ ಹಾಗೂ ಗೌರಿ–ಗಣೇಶ ಹಬ್ಬದ ಹಾರ್ದಿಕ ಶುಭಾಶಯಗಳು.

ಸಂಪಾದಕರು
**ಹೆಚ್.ಎಂ. ಶಿವಪ್ರಕಾಶ್**
ಪ್ರಧಾನ ವ್ಯವಸ್ಥಾಪಕರು(ಗ್ರಾ. ಸಂ), ಬೆಸ್ಕಾಂ

# ನಮ್ಮ ಊರು, ನಮ್ಮ ಜಿಲ್ಲೆ – ಬಾಗಲಕೋಟೆ

ವಿಜಯಪುರ (ಬಿಜಾಪುರ) ಜಿಲ್ಲೆಯ ಭಾಗವಾಗಿದ್ದ ಬಾಗಲಕೋಟೆಯನ್ನು 1997ರಲ್ಲಿ ಪ್ರತ್ಯೇಕ ಜಿಲ್ಲೆಯನ್ನಾಗಿ ಮಾಡಲಾಯಿತು.

ಆರಂಭದಲ್ಲಿ ಆರು ತಾಲ್ಲೂಕುಗಳನ್ನು ಹೊಂದಿದ್ದ ಈ ಜಿಲ್ಲೆಗೆ ಹೊಸದಾಗಿ ಮೂರು ತಾಲ್ಲೂಕುಗಳನ್ನು ಸೇರಿಸಿ ಒಟ್ಟು 9 ತಾಲ್ಲೂಕುಗಳು ಹಾಗೂ ಏಳು ವಿಧಾನಸಭಾ ಕ್ಷೇತ್ರಗಳನ್ನು ರಚಿಸಲಾಗಿದೆ.

ಜಮಖಂಡಿ, ಬೀಳಗಿ, ಮುಧೋಳ, ಬಾಗಲಕೋಟೆ, ಬಾದಾಮಿ, ಹುನಗುಂದ, ಗುಳೇದಗುಡ್ಡ, ರಬಕವಿ–ಬನಹಟ್ಟಿ ಹಾಗೂ ಇಳಕಲ್ ತಾಲ್ಲೂಕುಗಳನ್ನು ಹೊಂದಿದೆ.

ಸುಮಾರು 17 ಲಕ್ಷ ಜನಸಂಖ್ಯೆಯನ್ನು ಹೊಂದಿರುವ ಈ ಜಿಲ್ಲೆಯಲ್ಲಿ ಕಬ್ಬು, ಜೋಳ, ಮೆಕ್ಕೆಜೋಳ, ಸೂರ್ಯಕಾಂತಿ, ಕಡಲೆಕಾಯಿ, ಈರುಳ್ಳಿ, ತೊಗರಿ ಪ್ರಮುಖ ಬೆಳೆಗಳು.

ಕೃಷ್ಣಾನದಿ, ಮಲಪ್ರಭಾ ಮತ್ತು ಘಟಪ್ರಭಾ ಇಲ್ಲಿನ ಪ್ರಮುಖ ನದಿಗಳು.

ಕೃಷ್ಣಾನದಿಯ ಮೇಲ್ದಂಡೆಯಿಂದಾಗಿ ಪುರಾತನ ಬಾಗಲಕೋಟೆ ನಗರ ಮುಳುಗಡೆಯಾಗಿದ್ದು ಐದು ಕಿ.ಮೀ. ದೂರದಲ್ಲಿ ನೂತನ ನಗರವನ್ನು ಸ್ಥಾಪಿಸಲಾಗಿದೆ.


ಈ ಜಿಲ್ಲೆಯು ವಿಭಿನ್ನ ಸಂಸ್ಕೃತಿಗಳ ತವರೂರು. ಇಳಕಲ್ ಸೀರೆ ಮತ್ತು ಪಿಂಕ್‌ಗ್ರಾನೈಟ್, ಗುಳೇದಗುಡ್ಡದ ಕಣ, ಅಮೀನಗಢದಕರದಂಟು, ಮಹಾಲಿಂಗಪುರದ ಬೆಲ್ಲ ಮತ್ತು ಜಮಖಾನೆಗಳು, ಮುಧೋಳದ ನಾಯಿತಳಿ, ಕಲಾದಗಿಯಸುಣ್ಣ, ಇವು ಈ ಜಿಲ್ಲೆಯ ವೈಶಿಷ್ಟ್ಯಗಳು.

ಪ್ರವಾಸಿತಾಣಗಳಾದ ಮಹಾಕೂಟ, ಬಾದಾಮಿ, ಐಹೊಳೆ, ಪಟ್ಟದಕಲ್ಲು, ಕೂಡಲಸಂಗಮ ಮುಂತಾದವು ಈ ಜಿಲ್ಲೆಯ ಐತಿಹಾಸಿಕ ಸಂಪತ್ತನ್ನು ಜಗತ್ತಿಗೆ ಸಾರಿದ ಸ್ಥಳಗಳು.

ಹೀಗೆ ತನ್ನ ವೈವಿಧ್ಯತೆಯಿಂದ ಚಾರಿತ್ರಿಕವಾಗಿಯೂ ಮತ್ತು ಸಾಂಸ್ಕೃತಿಕವಾಗಿಯೂ ಸಮೃದ್ಧಿಯಾಗಿರುವ ಜಿಲ್ಲೆ ಬಾಗಲಕೋಟೆ.

**ಆಲಮಟ್ಟಿ ಉದ್ಯಾನವನ :** ಆಲಮಟ್ಟಿಯಲ್ಲಿ ಶಿಲಾವನ, ಕೃಷ್ಣಾ ಮತ್ತು ಲವ ಎಂಬ ಹೆಸರಿನ ಉದ್ಯಾನವನಗಳಿವೆ. ಇಲ್ಲಿ ಮೊಗಲ್, ಇಟಾಲಿಯನ್ ಮತ್ತು ಫ್ರೆಂಚ್‌ಉದ್ಯಾನವನವಿದೆ. ಬೃಹತ್ ಪ್ರವೇಶ ದ್ವಾರಗಳೂ ಮತ್ತು ಸಾವಿರಾರು ಜನರು ಒಟ್ಟಿಗೆ ಕುಳಿತು ವೀಕ್ಷಿಸಬಹುದಾದ ಸಂಗೀತ ಕಾರಂಜಿಗಳನ್ನೂ ನಿರ್ಮಿಸಿದ್ದಾರೆ.

**ಕೂಡಲ ಸಂಗಮ ಕ್ಷೇತ್ರ :** ಬಾಗಲಕೋಟೆಯಿಂದ 52 ಕಿ.ಮೀ. ದೂರದ ಕೂಡಲ ಸಂಗಮ ಕ್ಷೇತ್ರ ಕೃಷ್ಣಾ ಮತ್ತು ಮಲಪ್ರಭಾ ನದಿಗಳ ಸಂಗಮ ಸ್ಥಳದಲ್ಲಿದೆ. 12ನೇ ಶತಮಾನದ ಸಾಮಾಜಿಕ ಕ್ರಾಂತಿಪುರುಷ ಬಸವಣ್ಣನವರ ಆರಾಧ್ಯದೈವವಾದ ಕೂಡಲ ಸಂಗಮ ದೇವರಕ್ಷೇತ್ರ. ಬಸವಣ್ಣನವರು ಕೊನೆಗೆ ಲಿಂಗೈಕ್ಯರಾದ ಸ್ಥಳವೂ ಇದೇ ಆಗಿದೆ.



ಚಾಲುಕ್ಯ ಶೈಲಿಯಲ್ಲಿ ಕಟ್ಟಿರುವ ಪುರಾತನಕಾಲದ ವಾಸ್ತು ಶಿಲ್ಪದಿಂದ ಕೂಡಿರುವ ಸಂಗಮೇಶ್ವರ ದೇವಾಲಯವು ಇಲ್ಲಿನ ಆಕರ್ಷಣೀಯ ಸ್ಥಳ.

**ಬಾದಾಮಿ ಗುಹಾಂತರ ದೇವಾಲಯಗಳು :**

ಬಾದಾಮಿಯ ದೇವಾಲಯಗಳಲ್ಲಿ ಮಾಲೆಗಿತ್ತಿ ಶಿವಾಲಯ, ಲಕುಲೀಶ ದೇವಾಲಯ ಮತ್ತು ಭೂತನಾಥ ದೇವಾಲಯಗಳ ಗುಂಪು ಪ್ರಸಿದ್ಧವಾಗಿದೆ. ಮೇಗುತಿ ಶಿವಾಲಯವು ಒಂದು ಚಿಕ್ಕಗುಡ್ಡದ ಮೇಲಿರುವ ದೇವಾಲಯ. ಇಮ್ಮಡಿ ಪುಲಿಕೇಶಿಯ ಆಶ್ರಯದಲ್ಲಿ ರವಿಕೀರ್ತಿಯು ಈ ದೇವಾಲಯವನ್ನು ನಿರ್ಮಿಸಿದನೆಂದು ಹೇಳಲಾಗಿದೆ.



ಬಾದಾಮಿಯ ಕೋಟೆಗೆ ಎದುರಾಗಿರುವ ಕಲ್ಲಿನ ಬೆಟ್ಟವನ್ನು ಕೊರೆದು ಕೆಲವು ಗುಹಾ ದೇವಾಲಯಗಳನ್ನು ನಿರ್ಮಿಸಲಾಗಿದೆ. ಸುಮಾರು 300 ಮೆಟ್ಟಿಲುಗಳನ್ನು ಹತ್ತಿ ಈ ಗುಹಾಂತರ ದೇವಾಲಯಗಳನ್ನು ತಲುಪಬೇಕಾಗುವುದು.

ಇಲ್ಲಿ ಸುಮಾರು 45 ಎಕರೆ ವಿಶಾಲ ಪ್ರದೇಶದಲ್ಲಿ ಮೈದಳೆದಿರುವ ಒಂದು ಹೊಂಡವನ್ನು ಅಗಸ್ತ್ಯತೀರ್ಥ ಎಂದು ಕರೆಯುತ್ತಾರೆ. ಸ್ಥಳ ಪುರಾಣದ ಪ್ರಕಾರ ಹಿಂದಿನ ಕಾಲದಲ್ಲಿ ಅಗತ್ಯ ಮುನಿಗಳು ಇಲ್ಲಿ ಆಶ್ರಮವನ್ನು ಸ್ಥಾಪಿಸಿದ್ದರಂತೆ. ಕಳೆದ ಕೆಲವು ವರ್ಷಗಳಿಂದ ವರುಣನ ಕೃಪೆಯಿಂದ ಈ ಹೊಂಡವು ಭರಪೂರ ಜಲಾಶಯವಾಗಿ ವಿಹಾರ ಸ್ಥಳವಾಗಿ ಪರಿಣಮಿಸಿದೆ.

**ಪಟ್ಟದಕಲ್ಲು:** ಪಟ್ಟದಕಲ್ಲು ಮಲಪ್ರಭಾ ನದಿಯದಂಡೆಯ ಮೇಲಿರುವ ಒಂದು ಚಿಕ್ಕಗ್ರಾಮ. ಬಾದಾಮಿಯಿಂದ ಇಲ್ಲಿಗೆ ತಲುಪಲು ಉತ್ತಮ ಸಾರಿಗೆ ವ್ಯವಸ್ಥೆ ಇದೆ. ವಿಶ್ವ ಪರಂಪರೆಯ ದೇವಾಲಯಗಳಲ್ಲಿ ಪಟ್ಟದಕಲ್ಲಿನ ನಿರ್ಮಾಣ ವಾಸ್ತುಶಿಲ್ಪವು ಸಂಸ್ಕೃತಿಯ ಸಂಗಮ ತಾಣವೆನಿಸಿದೆ.

ಈ ಕ್ಷೇತ್ರದಲ್ಲಿ ದಕ್ಷಿಣ ಭಾರತದ ಅಪರೂಪ ವಾಸ್ತುಶಿಲ್ಪವನ್ನು ಕಾಣಬಹುದು. ಒಟ್ಟು ಹತ್ತು ದೇವಾಲಯಗಳು ನಿರ್ಮಾಣವಾಗಿದ್ದು ಅವುಗಳಲ್ಲಿ ನಾಲ್ಕು ಇಂಡೊ–ಆರ್ಯನ್ ಶೈಲಿಯಲ್ಲಿದೆ. ಉಳಿದ ಆರು ಚಾಲುಕ್ಯ ಶೈಲಿಯಲ್ಲಿವೆ. ಎಲ್ಲವೂ ಸುಂದರವಾದ ಕೆತ್ತನೆಗೆ ಹೆಸರಾಗಿವೆ.

**ಐಹೊಳೆ ನಗರ :** ಇಲ್ಲಿನ ಭವ್ಯ ದೇವಾಲಯಗಳು ಈಗ ಭಗ್ನಾವಶೇಷಗಳಾಗಿದ್ದರೂ ಹಿಂದೊಮ್ಮೆ ವೈಭವದಿಂದ ಮೆರೆದ ಸಾಕ್ಷಿಗಳಾಗಿ ತನ್ನತ್ತ ನೋಡುಗರನ್ನು ಸೆಳೆಯುತ್ತವೆ.

**ಇಳಕಲ್ ಸೀರೆ:** ಈ ಜಿಲ್ಲೆಯ ಇಳಕಲ್ ಗ್ರಾಮ ಬಹಳ ಹಿಂದಿನಿಂದಲೂ ಹತ್ತಿ ಮತ್ತು ರೇಷ್ಮೆ ಸೀರೆಗಳಿಗೆ ಹೆಸರಾಗಿದೆ. ಇವು ಕರ್ನಾಟಕ ಮಾತ್ರವಲ್ಲದೆ ನೆರೆಯ ರಾಜ್ಯಗಳಲ್ಲಿಯೂ ಜನಪ್ರಿಯವಾಗಿವೆ. ಊರಿನ ಹೊರಗಿನ ಪ್ರದೇಶದಲ್ಲಿ ದೊರೆಯುವ ಕೆಂಪು ಗಟ್ಟಿಕಲ್ಲಿಗೂ ಪ್ರಸಿದ್ಧಿಯಾಗಿದೆ. ಇತ್ತೀಚೆಗೆ ಇದು ಗಣಿ ಉದ್ದಿಮೆಯಾಗಿ ವ್ಯವಹಾರ ಪ್ರಮುಖವಾಗಿದೆ.

# ದಿನಾಂಕ 4.5.2019 ರಂದು ಬೆವಿಕಂ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಬೆಂಗಳೂರಿನ ಅಂಬೇಡ್ಕರ್ ಭವನ ಸಭಾಂಗಣದಲ್ಲಿ ಆಚರಿಸಲಾಯಿತು
























# ಬೆವಿಕಂನ ವತಿಯಿಂದ ವಿದ್ಯುತ್ ಸುರಕ್ಷತೆಯ ಕುರಿತಂತೆ ಅರಿವು ಮೂಡಿಸಲು ತೆಗೆದುಕೊಳ್ಳಲಾಗಿರುವ ಕ್ರಮಗಳು

- ಬೆವಿಕಂ ವ್ಯಾಪ್ತಿಯಲ್ಲಿ ಇತ್ತೀಚೆಗೆ ವಿದ್ಯುತ್ ಅವಘಡಗಳು ಅಧಿಕ ಸಂಖ್ಯೆಯಲ್ಲಿ ಸಂಭವಿಸುತ್ತಿರುವ ಹಿನ್ನೆಲೆಯಲ್ಲಿ, ಗ್ರಾಹಕರಲ್ಲಿ ವಿದ್ಯುತ್ ಸುರಕ್ಷತೆ ಕುರಿತಂತೆ ಹೆಚ್ಚಿನ ಅರಿವು ಮೂಡಿಸುವ ಸಲುವಾಗಿ, ಅನೇಕ ಸುರಕ್ಷತಾ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನಡೆಸಲಾಗುತ್ತಿದೆ.

- ವಿದ್ಯುತ್ ಸುರಕ್ಷತೆಗೆ ಸಂಬಂಧಿಸಿದಂತೆ, ಸಾರ್ವಜನಿಕರು ಅನುಸರಿಸಬೇಕಾದ ಕ್ರಮಗಳ ಬಗ್ಗೆ ದೂರದರ್ಶನ ಮಾಧ್ಯಮವಾದ ಎಲ್ಲಾ ಕನ್ನಡ ವಾಹಿನಿಗಳಲ್ಲಿ ಜಾಹೀರಾತನ್ನು ನೀಡಲಾಗಿದೆ. ಜೊತೆಗೆ ಆಕಾಶವಾಣಿ ಮಾಧ್ಯಮದಲ್ಲಿಯೂ, ಪ್ರಚಲಿತದಲ್ಲಿರುವ ರೇಡಿಯೋ ವಾಹಿನಿಗಳಲ್ಲಿ ಸಹ ಸುರಕ್ಷತೆ ಕುರಿತಾದ ಸಂದೇಶಗಳನ್ನು ಬಿತ್ತರಿಸಲಾಗುತ್ತಿದೆ. ಜಾಹೀರಾತಿನ ವಿಷಯಗಳು, ಇತ್ತೀಚೆಗೆ ಸಂಭವಿಸಿರುವ ವಿದ್ಯುತ್ ಅವಘಡಗಳಲ್ಲಿ ಗಾಯಾಳುಗಳ ನಿರ್ಲಕ್ಷ್ಯದ ಕುರಿತದ್ದಾಗಿದ್ದು, ಮುಂದಿನ ದಿನಗಳಲ್ಲಿ ಎಲ್ಲರೂ ಎಚ್ಚರ ವಹಿಸುವ ದೃಷ್ಟಿಯಿಂದ ಸಾರ್ವಜನಿಕರ ಹಿತಾಸಕ್ತಿಗೋಸ್ಕರ ಸಿದ್ಧಪಡಿಸಲಾಗಿದೆ.

- ವಿದ್ಯುತ್ ನಿರ್ವಹಣೆಯ ಕುರಿತಂತೆ, ಯಾವ ಕೆಲಸವನ್ನು ಮಾಡಬೇಕು ಹಾಗೂ ಯಾವ ಕೆಲಸವನ್ನು ಮಾಡಬಾರದೆಂಬ ವಿಷಯಕ್ಕೆ ಕುರಿತಂತೆ ದಿನ ಪತ್ರಿಕೆಗಳಲ್ಲಿ ಜಾಹೀರಾತುಗಳನ್ನು ನೀಡಲಾಗಿದೆ.





- ಬೆವಿಕಂ ವ್ಯಾಪ್ತಿಗೆ ಒಳಪಡುವ ಎಲ್ಲಾ ಗ್ರಾಹಕರಿಗೂ, ಪ್ರತಿ ತಿಂಗಳು ನೀಡುವ ವಿದ್ಯುತ್ ಬಿಲ್‌ನ ಜೊತೆ, ಸಾರ್ವಜನಿಕರು ಸಾಮಾನ್ಯವಾಗಿ ಅನುಸರಿಸಬೇಕಾದ ಸುರಕ್ಷತಾ ಕ್ರಮಗಳಿರುವ ಪೋಸ್ಟರ್‌ಗಳನ್ನು ಮನೆ ಮನೆಗೂ ತಲುಪಿಸಲಾಗಿದೆ.

# ಸಂಯೋಜಿತ ಹಾಗೂ ಸುಸಜ್ಜಿತ ಬೆವಿಕಂನ 24x7 ಸಹಾಯವಾಣಿ

- ಗ್ರಾಹಕರ ಅನುಕೂಲಕ್ಕಾಗಿ ಬೆವಿಕಂ 24x7 ಗ್ರಾಹಕರ ಸಹಾಯವಾಣಿಯನ್ನು ಆಧುನಿಕ ತಂತ್ರಜ್ಞಾನ ಹಾಗು ತಂತ್ರಾಂಶ ಅಭಿವೃದ್ಧಿ ಮತ್ತು ಸ್ವಯಂಚಾಲಿತ ಕರೆ ವರ್ಗಾವಣೆಯೊಂದಿಗೆ ಸ್ಥಾಪಿಸಲಾಗಿದೆ. ಗ್ರಾಹಕ ಸಹಾಯವಾಣಿ ಶುಲ್ಕ ರಹಿತ ಸಂಖ್ಯೆ 1912 ಗೆ ವಿದ್ಯುತ್ ಸಂಬಂಧಿತ ದೂರುಗಳನ್ನು ನೊಂದಾಯಿಸಲು 45 ಸಹವರ್ತಿ ಮಾರ್ಗಗಳಿದ್ದು ಮಲ್ಟಿ ಚಾನಲ್ ಹೊಂದಿದೆ. ಗ್ರಾಹಕರು ದೂರವಾಣಿ, ಎಸ್. ಎಂ. ಎಸ್, ಆನ್‌ಲೈನ್, ಇ–ಮೇಲ್, ಫೇಸ್‌ಬುಕ್, ವಾಟ್ಸ್ ಆಪ್, ಮೊಬೈಲ್ ಮಿತ್ರ ಆಪ್ ಹಾಗೂ ಟ್ವಿಟರ್ ಮೂಲಕ ದೂರುಗಳನ್ನು ನೋಂದಾಯಿಸುವ ಸೌಲಭ್ಯ ಕಲ್ಪಿಸಿದೆ. ಇದಲ್ಲದೆ ಹಾಲಿ ಇರುವ ಬೆ.ವಿ.ಕಂ. ಹೆಚ್ಚುವರಿಯಾಗಿ 15 ಆಸನಗಳನ್ನು ದಿನಾಂಕ 06.06.2019 ರಿಂದ ಸೇರ್ಪಡೆಗೊಳಿಸಲಾಗಿದೆ. ಇದರಿಂದಾಗಿ ಬೆವಿಕಂನ ಸಹಾಯವಾಣಿಯನ್ನು 45 ರಿಂದ 60 ಆಸನಗಳಿಗೆ ಉನ್ನತೀಕರಿಸಲಾಗಿದೆ.

- **ಬೆವಿಕಂ ಗ್ರಾಹಕರ ಅನುಕೂಲಕ್ಕಾಗಿ ವಿದ್ಯುತ್ ಸಂಬಂಧಿತ ದೂರು/ಸಲಹೆಗಳನ್ನು ಸಲ್ಲಿಸಲು ಕೆಳಕಂಡ ವಿಧಾನಗಳನ್ನು ಅಳವಡಿಸಿಕೊಂಡಿದೆ:**

  - ಸುರಕ್ಷತಾ ದೂರುಗಳಿಗೆ ವಾಟ್ಸ್‌ಪ್ ಮೆಸೇಜ್– 9483191212 / 9483191222
  - ವಾಟ್ಸ್‌ಪ್ ಮೆಸೇಜ್ – 9449844640
  - ಫೇಸ್‌ಬುಕ್ – BESCOM
  - ಟ್ವಿಟರ್ – @NammaBescom
  - ಇ–ಮೇಲ್– helpline@bescom.co.in helplinebescom@gmail.com
  - ಬೆಸ್ಕಾಂ ಮಿತ್ರ ಮೊಬೈಲ್ ಆಪ್
  - ಆನ್‌ಲೈನ್ ದೂರುಗಳ ದಾಖಲಾತಿ – www.bescom.ipgrs.org



ಪ್ರತಿ ತಿಂಗಳ 3ನೇ ಶನಿವಾರದಂದು ಎಲ್ಲಾ ಉಪವಿಭಾಗಗಳಲ್ಲಿ ಮಧ್ಯಾಹ್ನ 3.00 ರಿಂದ ಸಂಜೆ 5.30 ಗಂಟೆಯವರೆಗೆ ಗ್ರಾಹಕ ಸಂವಾದ ಸಭೆಯನ್ನು ನಡೆಸಿ ಗ್ರಾಹಕರ ಕುಂದು ಕೊರತೆಗಳ ಬಗ್ಗೆ ಚರ್ಚಿಸಲಾಗುವುದು.

# ಬೆಂಗಳೂರಿನಲ್ಲಿ ವಿದ್ಯುತ್ ಸರಬರಾಜಿಗಾಗಿ ಮೂಲ ಸೌಕರ್ಯಗಳನ್ನು ಬೆವಿಕಂ ವತಿಯಿಂದ ಬಲವರ್ಧನೆಗೊಳಿಸುವ ಕುರಿತು

* ಮಳೆಗಾಲದಲ್ಲಿ ಮಳೆಗಾಳಿಯಿಂದಾಗಿ ವಿದ್ಯುತ್ ಓವರ್‌ಹೆಡ್ ಲೈನ್‌ಗಳು ಹಾನಿಗೊಳಗಾಗುವುದಲ್ಲದೇ, ವಿದ್ಯುತ್ ಅಡಚಣೆಗಳು ಹಾಗೂ ವಿದ್ಯುತ್ ಅವಘಡಗಳು ಉಂಟಾಗುವ ಸಾಧ್ಯತೆಗಳು ಹೆಚ್ಚಿರುತ್ತವೆ.

* ಈಗಾಗಲೇ ಮುಂಗಾರು ಪೂರ್ವ ಹಾಗು ಮುಂಗಾರು ಮಳೆ ಗಾಳಿಯಿಂದಾಗಿ ಬೆವಿಕಂ ವ್ಯಾಪ್ತಿಯಲ್ಲಿ ಹೆಚ್ಚಿನ ಸಂಖ್ಯೆ ಮರಗಳು/ರೆಂಬೆ ಕೊಂಬೆಗಳು ಬಿದ್ದು, ಅನೇಕ ವಿದ್ಯುತ್ ಕಂಬಗಳು ಹಾನಿಗೊಳಗಾಗಿ ಧರೆಗುರುಳಿರುತ್ತವೆ. ಈ ಸಂಬಂಧ, ಬೆಂಗಳೂರು ಮಹಾನಗರ ಒಂದರಲ್ಲೇ ಅನೇಕ ಪ್ರದೇಶಗಳಲ್ಲಿ ವಿದ್ಯುತ್ ಅಡಚಣೆಯುಂಟಾಗಿರುತ್ತದೆ. ಆದ ಕಾರಣ, ಮುಂದಿನ ಮೂರು ವರ್ಷಗಳಲ್ಲಿ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಪ್ರಸ್ತುತವಿರುವ ಓವರ್‌ಹೆಡ್ ಲೈನ್‌ಗಳನ್ನು ಭೂಗತ ಮತ್ತು ಎಬಿ ಕೇಬಲ್‌ಗಳಾಗಿ ಪರಿವರ್ತಿಸುವ ಕಾರ್ಯವನ್ನು ಹಮ್ಮಿಕೊಂಡಿದ್ದು, ಈ ಯೋಜನೆಗೆ ತಗಲುವ ಅಂದಾಜು ವೆಚ್ಚ ರೂ. 5300/– ಕೋಟಿಗಳು ಅನುಮೋದಿಸಲ್ಪಟ್ಟಿರುತ್ತದೆ.

* ಪ್ರಸ್ತುತ ವರ್ಷದಲ್ಲಿ ರೂ. 1870/– ಕೋಟಿ ವೆಚ್ಚದ ಕಾರ್ಯಗಳನ್ನು ಕೈಗೊಳ್ಳಲಾಗುವುದು. ದಿನಾಂಕ 28.05.2019 ರಂದು ನಡೆದ ಮಂಡಳಿಯ ಸಭೆಯಲ್ಲಿ ರೂ. 1870 ಕೋಟಿಯ ವೆಚ್ಚದ ಕಾರ್ಯಕ್ಕೆ ಅನುಮೋದನೆ ದೊರೆತಿದ್ದು, ಸದರಿ ಕಾರ್ಯಕ್ಕೆ ಕಾರ್ಯಾದೇಶವನ್ನು ನೀಡಲಾಗುತ್ತಿದೆ.

* ಸಮಗ್ರವಾಗಿ ಅಧ್ಯಯನ ಮಾಡಿ, ಹೆಚ್ಚಾಗಿ ಮಳೆಗಾಳಿಯ ಸಂದರ್ಭದಲ್ಲಿ ವಿದ್ಯುತ್ ಅಡಚಣೆಯುಂಟಾಗುವ ಪ್ರದೇಶಗಳನ್ನು ಆಯ್ಕೆ ಮಾಡಿ ಮೊದಲನೆಯ ಹಂತದಲ್ಲಿ ಈ ಯೋಜನೆಯ ಅನುಷ್ಠಾನ ಕಾರ್ಯವನ್ನು ಕೈಗೊಳ್ಳಲಾಗುವುದು.


  ಈ ಮೇಲಿನ ಎಲ್ಲಾ ಕಾರ್ಯಗಳನ್ನು ಕೈಗೊಳ್ಳುವುದರಿಂದ ನಗರಕ್ಕೆ ಅನಿಯಮಿತ ವಿದ್ಯುತ್ ಸರಬರಾಜು ದೊರಕುವುದಲ್ಲದೆ, ಪ್ರಕೃತಿ ವಿಕೋಪಗಳಿಂದುಂಟಾಗುವ ವಿದ್ಯುತ್ ಅಡಚಣೆಗಳನ್ನು ಕ್ರಮೇಣ ತಡೆಗಟ್ಟಬಹುದಾಗಿದೆ.

# ಮಂಕುತಿಮ್ಮನ ಕಗ್ಗ – ಸತ್ಕರ್ಮಗಳ ಸಾಂಗತ್ಯ

*ಹಳೆಯ ಮಲೆ ಹಳೆಯ ನೆಲವಾದೊಡೆಯು ಮೊರತೆ ಮಳೆ ।*
*ಹೊಳೆನೀರನಾವಗಂ ಪೊಸದಾಗಿಸುವವೊಲ್ ॥*
*ಹಳೆಯ ಕರ್ಮವ ಹೊಸದುಕೊಚ್ಚಿ ಪೌರುಷನದಿಯ ।*
*ಬೆಳೆಯಿಪುದು ನವತೆಯಲಿ – ಮಂಕುತಿಮ್ಮ ॥*

ಬೆಟ್ಟದ ತಪ್ಪಲಿನಿಂದಲೋ, ಕಾಡಿನ ಮಡಿಲಿನಿಂದಲೋ ನದಿಯೊಂದು ಹುಟ್ಟಿ ಸಮುದ್ರದತ್ತ ಹರಿಯುತ್ತದೆ. ಅದು ಬಳಸಿಕೊಂಡು ಸಾಗುವ ಬೆಟ್ಟ, ಬಯಲು, ತಿರುವುಗಳೆಲ್ಲ ಹಳೆಯದಾಗಿಯೇ ಉಳಿದಿರುತ್ತವೆ. ಬೆಟ್ಟದ ಎತ್ತರದಲ್ಲಾಗಲಿ ಬಯಲು ಮಣ್ಣಿನಲ್ಲಾಗಲಿ ವ್ಯತ್ಯಾಸವಾಗುವುದಿಲ್ಲ. ಅವು ಇದ್ದಂತೆಯೇ ಇರುತ್ತವೆ. ಹೆಚ್ಚೆಂದರೆ ಋತುಗಳನ್ನಾಧರಿಸಿ ಮರಗಿಡಗಳ ಹೂವು–ಹಣ್ಣು, ಹಸಿರಿನಲ್ಲಿ ಬದಲಾವಣೆಯನ್ನು ಕಾಣಬಹುದು ಅಷ್ಟೇ. ಆದರೆ ಕಾನುಮಲೆಗಳ ತಡಿಯಿಂದ ಮೈತುಂಬಿ ಹರಿಯುವ ನದಿ ಮಾತ್ರ ನಿತ್ಯ ನೂತನವಾಗಿರುತ್ತದೆ. ನೆಲದಾಳದಿಂದ ಉಕ್ಕುವ ನೀರ ಚಿಲುಮೆಗಳು, ಹನಿಹನಿದು ಹೊಳೆಯೊಡಲ ತುಂಬುವ ಮಳೆಯು ಈ ಹೊಸತನಕ್ಕೆ ಕಾರಣವಾಗಿವೆ. ಹೊಸ ನೀರು ಬಂದಾಗ ಹಳೆಯ ನೀರು ಕೊಚ್ಚಿಹೋಗಲೇಬೇಕು. ಹೊಳೆಯು ಹರಿವನ್ನು ನಿಲ್ಲಿಸಿ ನಿಂತ ನೀರಾದರೆ ಬತ್ತಿಹೋಗುವುದು ಖಂಡಿತ. ಹಳೆಯದೂ ಹೊಸದಾಗುವ ಪ್ರಕ್ರಿಯೆಯಲ್ಲಿ ಚಿರ ನೂತನತೆಯನ್ನು ಉಳಿಸಿಕೊಂಡ ಸರಿತವು ಸಾಗರದಲ್ಲಿ ಐಕ್ಯವಾಗುತ್ತದೆ. ಹೀಗೆಯೇ ಮನುಷ್ಯ ಜೀವನವೂ ನಾವೀನ್ಯತೆಯನ್ನು ಪಡೆಯಬೇಕು.

ಹಳೆಯ ಕರ್ಮಶೇಷಗಳ ಭಾರವು ಬದುಕನ್ನು ಕಾಡುತ್ತಿರುತ್ತವೆ. ಇಂತಹ ಸ್ಥಿತಿಯಿಂದ ಪಾರಾಗಲು ಹೆಣಗುತ್ತಾ, ಅದರ ಸುಳಿಯಲ್ಲಿ ಸಿಲುಕುತ್ತೇವೆ. ಇದರಿಂದಾಗಿ ಹೊಸತನದತ್ತ ಮುಖ ಮಾಡುವುದು ಅಸಾಧ್ಯ. ಧರ್ಮ–ಅರ್ಥ–ಕಾಮಗಳನ್ನು ಸಾಧಿಸಲು ಕರ್ಮನಿರತರಾಗುವುದು ಅನಿವಾರ್ಯ. ಸದುದ್ದೇಶದಿಂದ ಕೂಡಿದ ಕರ್ಮವನ್ನು ನಿರಪೇಕ್ಷಿತವಾಗಿ ಮಾಡುತ್ತ ಸರ್ವಶ್ರೇಷ್ಠ ಮೋಕ್ಷಪದವನ್ನು ಪಡೆಯುವುದು ಜೀವಾತ್ಮನ ಪರಮ ಲಕ್ಷ್ಯ. ಇದಕ್ಕಾಗಿ ಸತ್ಯ–ಧರ್ಮಗಳ ದಾರಿಯಲ್ಲಿ ಪೌರುಷದಿಂದ ಬಾಳಬೇಕು, ಧೀರತನವು ಸ್ವಭಾವವಾಗಬೇಕು. ಸದಾ ಸತ್ಕಾರ್ಯಗಳನ್ನು ಮಾಡುವತ್ತ ಆಸಕ್ತರಿರಬೇಕು.



ಕೆಲಸವನ್ನು ಶ್ರದ್ಧೆಯಿಂದ ಯಜ್ಞವೆಂದು ಭಾವಿಸಿ ನಿರಪೇಕ್ಷಿತರಾಗಿ ಮಾಡಿದರೆ ಪುಣ್ಯಫಲ ಲಭ್ಯವಾಗುತ್ತದೆ. ಇದು ಬತ್ತದ ಚಿಲುಮೆಯಂತೆ ಜೀವನವನ್ನು ಪಾವನಗೊಳಿಸುತ್ತದೆ. ಹಳೆಯ ಕರ್ಮದೋಷಗಳು ಸತ್ಕರ್ಮಗಳ ಪುಣ್ಯದಲ್ಲಿ ಕೊಚ್ಚಿಹೋಗುತ್ತವೆ. ಅನುಭವಿಸಲೇಬೇಕಾದ ನೋವುಗಳೂ ತೀವ್ರವಾಗಿ ಕಾಡದೆ ಕಳಚಿಕೊಳ್ಳುತ್ತವೆ. ಬೆಟ್ಟದಂತೆ ಬಂದ ಸಂಕಷ್ಟಗಳು ಹತ್ತಿಯಂತೆ ಹಗುರಾಗುತ್ತವೆ.

ನದಿಯಂತೆಯೇ ಮನುಷ್ಯ ಜೀವಿತವೂ ಹೊಸ ಕ್ಷಣಗಳನ್ನು, ನಿರೀಕ್ಷೆಗಳನ್ನು ಎದುರುಗೊಳ್ಳಲು ಬಯಸುತ್ತದೆ. ಅದಕ್ಕಾಗಿ ನಿರಂತರವಾಗಿ ಹುಡುಕಾಡುತ್ತದೆ. ಆದರೆ ಹುಡುಕುವ ಆ ನವ್ಯತೆ ಹೇಗಿದೆ, ಹೇಗಿರಬೇಕು ಎಂಬ ಬಗ್ಗೆ ಅರಿವಿಲ್ಲದೆಯೇ, 'ಇನ್ನೇನಿದೆ ಹೊಸದು?' ಎಂಬ ಪ್ರಶ್ನೆಯೊಂದಿಗೆ ಕೆದಕುತ್ತ ಸಾಗುವ ಚಪಲ ಸಮಾಜದಲ್ಲಿದೆ. ಇದರಿಂದಾಗಿ ಜೀವನವು ಹರಿಯದೆಯೇ ಮಡುಗಟ್ಟಿದ ನೀರಾಗಿ ಬಿಡುತ್ತದೆ.

ಯಾವಾಗ ವರ್ತಮಾನದಲ್ಲಿರುವ ಹೊಸ ಅನುಭವವನ್ನು ಗ್ರಹಿಸುವ ಮಾನಸಿಕ ಸ್ಥಿರತೆ ಮೂಡುವುದೋ ಆಗ ಬದುಕು ಆಪ್ತವೆನ್ನಿಸುತ್ತದೆ. ಬದುಕನ್ನು, ಬಾಂಧವ್ಯಗಳನ್ನು ತೀವ್ರವಾಗಿ ಹಚ್ಚಿಕೊಂಡಾಗ ಭಾವೋದ್ವೇಗಕ್ಕೆ ಒಳಗಾಗುವುದು ಸಹಜ. ಜೀವನದ ಅರ್ಥವು ಮನನವಾದಂದು ನೋವು–ನಲಿವುಗಳಿಗೆ ಅಲುಗದ ದೃಢಮನಸ್ಸು ಸಿದ್ಧವಾಗುತ್ತದೆ. ಬಾಹ್ಯ ಪ್ರಪಂಚ ಎಷ್ಟು ಬದಲಾದರೂ ಮನುಷ್ಯನ ಚಿಂತನಾಶೈಲಿಯು ಬದಲಾಗದೇ ಕಂದಾಚಾರಗಳಲ್ಲಿ ಉಳಿದುಹೋದರೆ ಯಾರಿಗೂ ಕ್ಷೇಮವಿಲ್ಲ. ಹಾಗಾಗಿ ಹೊಸನೀರನ್ನು ತುಂಬಿಕೊಂಡು, ಹಳೆಯದನ್ನು ನೂಕಿಕೊಂಡು ಸಾಗುವ ಹೊಳೆಯ ನೀರಂತೆಕಾಡುವ ಕಹಿನೆನಪುಗಳನ್ನು ಕಳೆದುಕೊಂಡು ಬಾಳಬೇಕು.

# ಸಾಧಕರು ಇವರು : ಗಿರೀಶ್ ಕಾರ್ನಾಡ್



ಗಿರೀಶ್ ಕಾರ್ನಾಡ್

ಗಿರೀಶ್ ಕಾರ್ನಾಡರು ಕನ್ನಡದ ಖ್ಯಾತ ಸಾಹಿತಿ, ನಾಟಕಕಾರ, ಚಲನಚಿತ್ರ ನಟ ಹಾಗೂ ನಿರ್ದೇಶಕರಾಗಿ ಬಹುಮುಖ ಪ್ರತಿಭೆಗೆ ಹೆಸರಾಗಿದ್ದವರು.

ಕನ್ನಡಕ್ಕೆ ಏಳನೇ ಜ್ಞಾನ ಪೀಠ ಪ್ರಶಸ್ತಿಯನ್ನೂ ತಂದು ಕೊಟ್ಟವರು. ಅವರ ನಿಧನ ತುಂಬಲಾರದ ನಷ್ಟ ಎಂದೇ ಹೇಳಬೇಕು.

ಮಹಾರಾಷ್ಟ್ರದ ಮಥೇರಾನ್ ಕಾರ್ನಾಡರ ಜನ್ಮಸ್ಥಳ (ಜನನ : ಮೇ 19, 1938). ತಾಯಿ ಕೃಷ್ಣಾಬಾಯಿ, ಹತ್ತೊಂಬತ್ತರ ಹರಯದಲ್ಲಿ ಗಂಡನನ್ನು ಕಳೆದುಕೊಂಡ ಕೃಷ್ಣಾಬಾಯಿ, ಹತ್ತು ವರ್ಷಗಳ ನಂತರ ರಘುನಾಥ ಕಾರ್ನಾಡರನ್ನು ಮದುವೆಯಾದರು. ಈ ದಂಪತಿಯ ಕಿರಿಯ ಪುತ್ರ ಗಿರೀಶ ಕಾರ್ನಾಡ. ಅರ್ಧ ಮರಾಠಿ ಅರ್ಧ ಕನ್ನಡ ಪರಿಸರದಲ್ಲಿ ಅವರ ಬಾಲ್ಯ ಸುಪುಷ್ಟಗೊಂಡಿತು. ಅಮ್ಮನ ವ್ಯಕ್ತಿತ್ವದ ಗಟ್ಟಿತನ ಮಗನಿಗೂ ಬಂತು.

ಶಿರಸಿಯಲ್ಲಿ ಪ್ರಾಥಮಿಕ ಶಿಕ್ಷಣ, ಹೈಸ್ಕೂಲಿನಿಂದ ಪದವಿಯವರೆಗೆ ಧಾರವಾಡದಲ್ಲಿ ಕಲಿಕೆ. ಅಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ. ಭಾರತಕ್ಕೆ ಹಿಂದಿರುಗಿದ ಮೇಲೆ ಮದ್ರಾಸಿನ ಅಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ ಮ್ಯಾನೇಜರ್, ಪುಣೆಯ ಫಿಲ್ಮ್ ಅಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್ ನಿರ್ದೇಶಕರಾಗಿ ಕಾರ್ಯನಿರ್ವಹಣೆ. ರಾಜ್ಯ–ರಾಷ್ಟ್ರಮಟ್ಟದಲ್ಲಿ ಹಲವು ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿರುವ ಹೆಗ್ಗಳಿಕೆ ಅವರದು.

ರಂಗಭೂಮಿ ಕಾರ್ನಾಡರಿಗೆ ಬಾಲ್ಯದಿಂದಲೇ ಜೊತೆಯಾದ ಅಪ್ತಸಖ. ಸಂಚಾರಿ ನಾಟಕ ಕಂಪನಿಗಳ ನಾಟಕಗಳು ಹಾಗೂ ಯಕ್ಷಗಾನ ಪ್ರದರ್ಶನಗಳನ್ನು ನೋಡಲು ಅಪ್ಪನ ಜೊತೆ ಹೋಗುತ್ತಿದ್ದ ಅವರೊಳಗೆ ನಾಟಕದ ಕಥೆ – ಪದಗಳು ಬಾಲ್ಯದಲ್ಲೇ ಮೊಳೆಯತೊಡಗಿರಬೇಕು. ಆಧುನಿಕ ರಂಗಭೂಮಿಯನ್ನು ಮುಂಬಯಿ ಪರಿಚಯಿಸಿತು. ಮದ್ರಾಸ್‌ನಲ್ಲಿದ್ದಾಗ ಅಲ್ಲಿನ ಹವ್ಯಾಸಿ ರಂಗತಂಡಗಳೊಂದಿಗೆ ನಟರಾಗಿ, ನಿರ್ದೇಶಕನಾಗಿ ನಿಕಟ ಸಂಪರ್ಕ ಹೊಂದಿದ್ದರು. ಕನ್ನಡಕ್ಕೆ ಮೊದಲ 'ಸ್ವರ್ಣಕಮಲ' ಪುರಸ್ಕಾರ ತಂದುಕೊಟ್ಟ 'ಸಂಸ್ಕಾರ'ದ ಪ್ರಾಣೇಶಾಚಾರ್ಯನ ಪಾತ್ರ ನಿರ್ವಹಣೆ ಗಿರೀಶರಿಗೆ ಸಿನಿಮಾದ ರುಚಿ ಹತ್ತಿಸಿತು. ನಂತರದ ಪ್ರಯೋಗ ಎಸ್.ಎಲ್.ಭೈರಪ್ಪನವರ 'ವಂಶವೃಕ್ಷ' ಕಾದಂಬರಿಯನ್ನು ದೃಶ್ಯಮಾಧ್ಯಮಕ್ಕೆ ರೂಪಾಂತರಿಸಿದ್ದು, ಬಿ.ವಿ.ಕಾರಂತರೊಂದಿಗೆ ಸೇರಿ ಚಿತ್ರ ನಿರ್ದೇಶಿಸಿ, ಅತ್ಯುತ್ತಮ ನಿರ್ದೇಶನಕ್ಕಾಗಿ ರಾಷ್ಟ್ರಪ್ರಶಸ್ತಿ ಪಡೆದರು. 'ಕಾಡು', ಒಂದಾನೊಂದು ಕಾಲದಲ್ಲಿ', ತಬ್ಬಲಿಯು ನೀನಾದೆ ಮಗನೆ', ಕಾನೂರು ಹೆಗ್ಗಡತಿ' ಚಿತ್ರಗಳು ನಿರ್ದೇಶಕರಾಗಿ ಹೆಸರು ತಂದುಕೊಟ್ಟವು. ಬೇಂದ್ರೆ ಬಗೆಗಿನ ಸಾಕ್ಷ್ಯಚಿತ್ರ ಗಿರೀಶರ ದೃಶ್ಯಮಾಧ್ಯಮದ ಸಾಧನೆಗಳಲ್ಲೊಂದು.

'ಉತ್ಸವ್' ಹಾಗೂ 'ಚೆಲುವಿ' ಅವರ ನಿರ್ದೇಶನದ ಹಿಂದಿ ಚಿತ್ರಗಳು. 'ಕನಕ–ಪುರಂದರ' ಇಂಗ್ಲಿಷ್ ಸಾಕ್ಷ್ಯಚಿತ್ರ ನಾನ್ ಫೀಚರ್ ಫಿಲ್ಮ್ ವಿಭಾಗದಲ್ಲಿ ಸ್ವರ್ಣಕಮಲ ಪಡೆದಿದೆ. ನಟನಾಗಿ ಅವರು ಕಿರುತೆರೆ, ಬೆಳ್ಳಿತೆರೆಯ ಅನೇಕ ಪಾತ್ರಗಳಿಗೆ ಜೀವತುಂಬಿದ್ದಾರೆ. 'ಆನಂದಭೈರವಿ' ಚಿತ್ರದಲ್ಲಿನ ನೃತ್ಯಗುರುವಿನ ಪಾತ್ರದಲ್ಲಿನ ಅಭಿನಯ ಚಿತ್ರರಸಿಕರ ಮನಸ್ಸಿನಲ್ಲಿ ಈಗಲೂ ಹಸಿರಾಗಿದೆ.

ಕಾರ್ನಾಡರ ಪ್ರತಿಭೆ ಪ್ರಖರವಾಗಿ ಹೊರಹೊಮ್ಮಿರುವುದು ರಂಗಕೃತಿಗಳ ರಚನೆಯಲ್ಲಿ 'ಯಯಾತಿ' ಅವರ ಪೂರ್ಣಪ್ರಮಾಣದ ಮೊದಲ ನಾಟಕ. 'ತುಘಲಕ್', 'ಹಯವದನ', ನಾಗಮಂಡಲ', 'ತಲೆದಂಡ', ಅಗ್ನಿ ಮತ್ತು ಮಳೆ, 'ಅಂಜುಮಲ್ಲಿಗೆ', 'ಹಿಟ್ಟಿನ ಹುಂಜ', 'ಟಿಪ್ಪೂ ಸುಲ್ತಾನ ಕಂಡ ಕನಸು', 'ಒಡಕಲು ಬಿಂಬ', 'ಮದುವೆಯ ಅಲ್ಬಮ್', 'ಬೆಂದ ಕಾಳು ಅನ್ ಟೋಸ್ಟ್', 'ರಾಕ್ಷಸ–ತಂಗಡಿ' ಅವರ ಪ್ರಖ್ಯಾತ ನಾಟಕಗಳು. ನಾಟಕಗಳನ್ನು ಓದಿಯೂ ಸುಖಿಸಬಹುದು ಎನ್ನುವುದನ್ನು ಕನ್ನಡ ಓದುಗರ ಅನುಭವಕ್ಕೆ ತಂದುಕೊಟ್ಟವರು ಕಾರ್ನಾಡರು.




ಪದ್ಮಭೂಷಣ, ಜ್ಞಾನಪೀಠ, ಸಂಗೀತ ನಾಟಕ ಅಕಾಡೆಮಿಯ ಫೆಲೊ', ಗುಬ್ಬಿ ವೀರಣ್ಣ, ಕಾಳಿದಾಸ ಸಮ್ಮಾನ್ ಸೇರಿದಂತೆ ಹಲವು ಗೌರವ – ಪುರಸ್ಕಾರಗಳು ಕಾರ್ನಾಡರ ಸಾಧನೆಗೆ ಸಂದಿವೆ. ಪ್ರಶಸ್ತಿ ದೊರೆತವರು ಗತ್ತನ್ನೂ, ದೊರೆಯದವರು ಕೊರಗನ್ನೂ ತಲೆಯ ಮೇಲೆ ಹೊತ್ತುಕೊಂಡಿರುವ ಕಾಲದಲ್ಲಿ, ತಮಗೆ ದೊರೆತ ಜ್ಞಾನಪೀಠ ಪ್ರಶಸ್ತಿಯ ಪ್ರಭಾವಳಿಯಿಂದ ಕಾರ್ನಾಡರು ದೂರವಾಗಿದ್ದುದು ಕೂಡ ವಿಶೇಷ ಸಂಗತಿಯೇ. ಪ್ರಶಸ್ತಿಗಳ ಆಧಾರದಲ್ಲಿ ನಡೆಯುವ ಸಾಹಿತ್ಯಿಕ ಮೌಲ್ಯಮಾಪನವನ್ನು ಅವರು ವಿರೋಧಿಸುತ್ತಿದ್ದರು. ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಕಾರ್ನಾಡರು ದಿನಾಂಕ 10–6–2019 ರಂದು ನಿಧನರಾದರು. ತನ್ನ ಸಾವಿನಲ್ಲೂ ಸರ್ಕಾರಿ ಗೌರವದೊಂದಿಗೆ ಅಂತಿಮ ಸಂಸ್ಕಾರ ನಡೆಯಬಾರದೆನ್ನುವ ಕೊನೆಯಾಸೆ ಕೂಡ ಅವರು ದಂತಗೋಪುರ ಸಾಹಿತಿಯಾಗಿರಲಿಲ್ಲ ಎನ್ನುವುದಕ್ಕೆ ಸಾಕ್ಷಿಯಂತಿದೆ.

(ಸಂಗ್ರಹ ಲೇಖನ)

**ಹುಟ್ಟುಹಬ್ಬದ ಶುಭಾಶಯಗಳು**

**2019ನೇ ವರ್ಷದ ಜುಲೈ, ಆಗಸ್ಟ್ ಹಾಗೂ ಸೆಪ್ಟೆಂಬರ್ ತಿಂಗಳಿನಲ್ಲಿ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ಬೆಸ್ಕಾಂನ ಅಧಿಕಾರಿಗಳು / ಸಿಬ್ಬಂದಿಗಳಿಗೆ "ಬೆಸ್ಕಾಂ ಸ್ನೇಹಿ"ಯ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.**

**– ಸಂಪಾದಕೀಯ ಮಂಡಳಿ**




**ಹಾರ್ದಿಕ ಬೀಳ್ಕೊಡುಗೆ**

**ಹತ್ತು ಹಲವು ವರ್ಷ ಸೇವೆ ಸಲ್ಲಿಸಿ ಬೆಸ್ಕಾಂನ ಏಳಿಗೆಗೆ ಶ್ರಮಿಸಿ 2019ನೇ ವರ್ಷದ ಜುಲೈ, ಆಗಸ್ಟ್ ಹಾಗೂ ಸೆಪ್ಟೆಂಬರ್ ತಿಂಗಳಿನಲ್ಲಿ ನಿವೃತ್ತಿ ಹೊಂದುತ್ತಿರುವ ಅಧಿಕಾರಿಗಳು/ಸಿಬ್ಬಂದಿಗೆ "ಬೆಸ್ಕಾಂ ಸ್ನೇಹಿ"ಯ ಹಾರ್ದಿಕ ಬೀಳ್ಕೊಡುಗೆ.**

**– ಸಂಪಾದಕೀಯ ಮಂಡಳಿ**

# ಇವರು ನಮ್ಮ ಸಾಹಿತಿಗಳು : ಪ್ರೊ.ಎಸ್.ಎಸ್. ಭೂಸನೂರ ಮಠ

ಪ್ರೊ. ಸಂಗಯ್ಯ ಶಿವಮೂರ್ತಯ್ಯ ಭೂಸನೂರ ಮಠ (1910–1990) ವಚನ ಸಾಹಿತ್ಯದ ಶ್ರೇಷ್ಠ ವಿದ್ವಾಂಸರಾಗಿದ್ದರು.



ಪ್ರೊ. ಸಂಗಯ್ಯ ಶಿವಮೂರ್ತಯ್ಯ ಭೂಸನೂರ ಮಠ

ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು.

'ಭವ್ಯ ಮಾನವ' ಅವರ ಮಹಾಕಾವ್ಯ. ವಚನ ಸಾಹಿತ್ಯಕ್ಷೇತ್ರದಲ್ಲಿ ಅವರು ಹಲವು ಕೃತಿಗಳನ್ನು ಅತ್ಯಂತ ಸಮರ್ಥವಾಗಿ ಸಂಪಾದಿಸಿದ್ದಾರೆ. "ಶೂನ್ಯ ಸಂಪಾದನೆಯ ಪರಾಮರ್ಶೆ" ಅವರು ಶೂನ್ಯ ಸಂಪಾದನೆಯ ಬುನಾದಿಯ ಮೇಲೆ ಮಾನವ ಲೋಕದ ತತ್ವಚಿಂತನೆ ಮಾಡಿದ ಶ್ರೇಷ್ಠ ಗ್ರಂಥ.

ಸಾಹಿತ್ಯಕ್ಷೇತ್ರದಲ್ಲಿ ಇದು ವಿಶಿಷ್ಟ ಕೃತಿ. ಶಿವಶರಣರು ಕಂಡ ಸತ್ಯಾನುಭಾವದ ಸಾಕ್ಷಾತ್ಕಾರ ಹಾಗೂ ವಚನ ಸಾಹಿತ್ಯದ ಸಾರ ಸತ್ವವನ್ನು ಪ್ರತಿಬಿಂಬಿಸುವಂತಿದೆ.

ಇಲ್ಲಿ ಭಾರತೀಯತತ್ವ ಮತ್ತು ಅನುಭಾವ ಶಾಸ್ತ್ರಗಳಲ್ಲಿ ಬರುವ ಭಕ್ತಿ, ಜ್ಞಾನಯೋಗ ಮತ್ತು ಕ್ರಿಯೆಗಳ ಸಮನ್ವಯವನ್ನು ಕಾಣುತ್ತೇವೆ. ಇದೊಂದು ಸಾಹಸ ಕೃತಿ. ಭೂಸನೂರ ಮಠ ಅವರ ಇತರ ಕೃತಿಗಳು 'ಕಲ್ಯಾಣದಿಂದ ಕಾಶ್ಮೀರಕ್ಕೆ (1971)', 'ಘನಮಠದ ಶಿವಯೋಗಿಗಳ ಭಕ್ತಿ ಸುಧಾಸಾರ (1945)', 'ಸಿದ್ದಿ ನಂಜೇಶನ ಗುರುರಾಜಚಾರಿತ್ರ (1950)', ಮೋಳಿಗೆ ಮಾರಯ್ಯ ಮತ್ತು ರಾಗಿ ಮಹಾದೇವಿಯಮ್ಮ' ನವರ ವಚನಗಳು.

'ಗೌರಾಂಕನ ಮೋಳಿಗೆ ಮಾರಯ್ಯನ ಪುರಾಣ (1951)', 'ಅದೃಶ್ಯಕವಿಯ ಪ್ರೌಢರಾಯನ ಕಾವ್ಯ (1957)', 'ಮಹಾಲಿಂಗ ದೇವರ ಏಕೋತ್ತರ ಸ್ಥಲವಚನ ಸಾಹಿತ್ಯ ಸಂಗ್ರಹ (1965)', 'ಕಲ್ಲುಮಠದ ಪ್ರಭುದೇವರ ಲಿಂಗಲೀಲಾ ವಿಲಾಸ ಚಾರಿತ್ರ (1956)' ಹಾಗೂ ಇತ್ಯಾದಿಗಳು.

ಇವರ 'ಭವ್ಯ ಮಾನವ' ಕೃತಿಗೆ 1983 ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ.

'ಶೂನ್ಯ ಸಂಪಾದನೆಯ ಪರಾಮರ್ಶೆ'ಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಹಾಗೂ 1990 ರಲ್ಲಿ ಪಂಪ ಪ್ರಶಸ್ತಿಯೂ ಲಭಿಸಿದೆ.

ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಸಹ ಅವರಿಗೆ ಸಂದಿದೆ.

ಹೀಗೆ ಹಲವಾರು ಜನಪ್ರಿಯ ಕೃತಿಗಳನ್ನು ರಚಿಸಿದ್ದ ಭೂಸನೂರ ಮಠ ಅವರು 1990ರಲ್ಲಿ ನಿಧನರಾದರು.

# ಪ್ರೊ. ಎಂ. ಗೋಪಾಲಕೃಷ್ಣ ಅಡಿಗ

ಕನ್ನಡದ ಖ್ಯಾತ ಕವಿಯಾಗಿದ್ದ ಗೋಪಾಲಕೃಷ್ಣ ಅಡಿಗ ಅವರು ನವ್ಯಕಾವ್ಯದ ಶಿಲ್ಪಿ ಎಂದೇ ಹೆಸರಾದವರು.

ಇವರ 'ಭೂಮಿಗೀತ' 'ಶ್ರೀರಾಮನವಮಿಯ ದಿವಸ', ಭೂತ', 'ವರ್ಧಮಾನ', ಮೊದಲಾದವು ಆಧುನಿಕ ಕನ್ನಡದ ಶ್ರೇಷ್ಠ ಕವನಗಳ ಸಾಲಿನಲ್ಲಿ ಸೇರಿವೆ.

ಕಾವ್ಯದ ಜತೆಗೆ ಅವರು ಹಲವು ಕಥೆ, ಕಾದಂಬರಿ ಹಾಗೂ ಅನುವಾದ ಕೃತಿಗಳನ್ನು ರಚಿಸಿದ್ದಾರೆ.


ನವೋದಯ ಕಾವ್ಯದಲ್ಲಿ ಅನುಕರಣೆಯೇ ಹೆಚ್ಚಾಗುತ್ತಿದ್ದ ಕಾಲದಲ್ಲಿ ಹೊಸ ಹೊಸ ಅನುಭವಗಳಿಗೆ ಸ್ಪಂದಿಸುವ ಕಾವ್ಯವನ್ನು ರಚಿಸಿ ಹೊಸದೊಂದು ಮಾರ್ಗವನ್ನೇ ತೆರೆದ ಕವಿ ಗೋಪಾಲಕೃಷ್ಣ ಅಡಿಗರು.

ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಮೊಗೇರಿಯಲ್ಲಿ 1918ರ ಫೆಬ್ರುವರಿ 18ರಂದು ಅವರು ಜನಿಸಿದರು.

ಪುರೋಹಿತ ಮನೆತನದಿಂದ ಬಂದ ಅವರ ತಂದೆ ಸಂಸ್ಕೃತ ಹಾಗೂ ಕನ್ನಡದಲ್ಲಿ ದೇಶಭಕ್ತಿಗೀತೆ ಬರೆಯುತ್ತಿದ್ದರು.

ಅಡಿಗರು ಇಂಗ್ಲಿಷ್ ಎಂ.ಎ. ಪದವಿ ಪಡೆದು ಅಧ್ಯಾಪಕರಾಗಿದ್ದರು. ಕೆಲವು ಕಾಲೇಜುಗಳಲ್ಲಿ ಪ್ರಿನ್ಸಿಪಾಲರಾಗಿಯೂ, ನ್ಯಾಷನಲ್ ಬುಕ್ ಟ್ರಸ್ಟ್‌ನ ಉಪನಿರ್ದೇಶಕರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ.

'ಭಾವತರಂಗ' ಅಡಿಗರ ಮೊಟ್ಟಮೊದಲ ಕವನ ಸಂಕಲನ. 'ಚಂಡೆಮದ್ದಳೆ', ಹಿಮಗಿರಿಯಕಂದರ ಕಾವ್ಯಗಳು.



ಪ್ರೊ. ಎಂ. ಗೋಪಾಲಕೃಷ್ಣ ಅಡಿಗ

ಮಣ್ಣಿನವಾಸನೆ, ಕನ್ನಡದ ಅಭಿಮಾನ, ವಿಚಾರ ಪಥ, ನಮ್ಮ ಶಿಕ್ಷಣ ಕ್ಷೇತ್ರ, ಇವು ಅಡಿಗರ ವೈಚಾರಿಕ ಹಾಗೂ ವಿಮರ್ಶಾತ್ಮಕ ಲೇಖನಗಳು.

ಹುಲ್ಲಿನದಳಗಳು, ಸುವರ್ಣಕೀಟ, ಭೂಗರ್ಭಯಾತ್ರೆ, ರೈತರ ಹುಡುಗಿ, ಜನತೆಯ ಶತ್ರು, ಮುಕ್ತಾಫಲ, ಇತಿಹಾಸ, ದೆವ್ವದಕಥೆಗಳು, ಅನುವಾದಿತ ಕೃತಿಗಳು. ಅಡಿಗರು ತಮ್ಮ ಕವಿತೆಗಳ ಮೂಲಕ ಜನರನ್ನು ಎಚ್ಚರಿಸುತ್ತಲೇ ಬಂದರು.

ಅವರಿಗೆ 1973ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ 1974ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಬಂದವು.

ಮಧ್ಯಪ್ರದೇಶ ಸರ್ಕಾರದ 'ಕಬೀರ್ ಸಮ್ಮಾನ್' 1986ರಲ್ಲಿ ಲಭಿಸಿತು. 1993ರಲ್ಲಿ ಮರಣೋತ್ತರವಾಗಿ ಪಂಪ ಪ್ರಶಸ್ತಿಯನ್ನು ಕರ್ನಾಟಕ ಸರ್ಕಾರ ನೀಡಿ ಗೌರವಿಸಿದೆ.

ಅವರ ಅನೇಕ ಕವನ ಸಂಕಲನಗಳು ಪಠ್ಯ ಪುಸ್ತಕಗಳಾಗಿವೆ. 1979ರಲ್ಲಿ ಧರ್ಮಸ್ಥಳದಲ್ಲಿ ನಡೆದ 51ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಯ ಗೌರವ ಲಭಿಸಿದೆ.

## "ನನ್ನ ಪ್ರೀತಿಯ ಅಪ್ಪ"

ಜನ್ಮದಾತ ನೀನಾದೆ ನನಗಪ್ಪ
ನನ್ನಮ್ಮನ ಪ್ರೀತಿ ಪತಿ ನೀನಾದೆ ನನ್ನಪ್ಪ
ನೀ ಕೊಟ್ಟೆ ಆಕಾಶ ಭೂಮಿಗಳೆರಡು ಸೇರುವಷ್ಟು ಪ್ರೀತಿ
ಅದನಾ ಮರುಕೊಡಲಾರೆನೆಂಬ ಭೀತಿ
ಬೇರೆಲ್ಲು ಸಿಗದಷ್ಟು ಅಗಾಧವಾದ ರೀತಿ
ನೀರೆರೆದೆ ನನ್ನ ಚಿಗುರು ಕನಸುಗಳಿಗೆ ಬಾಲ್ಯದಲ್ಲೇ
ಪೋಷಿಸಿದೆ ಮುಳ್ಳು ತಂತಿಯಂತೆ ನೀ ನಿಂತು ಜೊತೆಯಲ್ಲೇ
ನೀ ಹರಸಿದೆ ನೀ ಬೆಳೆಸಿದ ಗಿಡ ಮರವಾಗಿ ಪ್ರತಿಫಲ ನೀಡುವಂತೆ
ಅನುಸರಿಸಿದೆ ನಾ ಆ ಸನ್ಮಾರ್ಗವಿಫಲವಾಗದಂತೆ
ನನ್ನೆಲ್ಲಾ ಯಶಸ್ಸಿಗೆ ನೀನಾದೆ ಕಾರಣ
ನಮಿಸುವೆ ನಿನಗೆ ನಾ ಬದುಕಿರುವ ಅನುಕ್ಷಣ
ಹೇ ಅಪ್ಪ ನೀನೆಷ್ಟು ಕರುಣಾಮಯಿ
ನಾ ಹೆಮ್ಮೆಯಿಂದ ಸಾರುವೆ ನೀನೊಬ್ಬ ವಿಶಾಲ ಹೃದಯಿ
ಏಳೇಳು ಜನ್ಮಕೂ ನೀನೇ ನನ್ನಪ್ಪ ನನ್ನ ದೇವರಪ್ಪ
ಪ್ರತಿ ಜನ್ಮದಲ್ಲೂ ನಾನೇ ನಿನ್ನ ಮಗನಪ್ಪ

**ನಂದೀಶ್ ಸಿ.ಪಿ**
ಸ. ಕಾ. ನಿ. ಇಂಜಿನಿಯರ್ (ಐ.ಟಿ ಮತ್ತು ಎಂ.ಐ.ಎಸ್)
ಬೆವಿಕಂ., ನಿಗಮ ಕಾರ್ಯಾಲಯ

### ಪ್ರತಿಭಾವಂತ ವಿದ್ಯಾರ್ಥಿ



**ವಿವೇಕ್ ವಿ.**
ಎಸ್.ಎಸ್.ಎಲ್.ಸಿ. **98.24%**

ಅಂಕಗಳು : 614/625
ಶಾಲೆ : ಸೌಂದರ್ಯ ಹೈಸ್ಕೂಲ್
ನಾಗಸಂದ್ರ, ಬೆಂಗಳೂರು-73
ತಂದೆ : ವೆಂಕಟೇಶ್ ಎಸ್.
ಹುದ್ದೆ : ಸ.ಕಾ.ನಿ ಇಂಜಿನಿಯರ್ (ವಿ)
ಕಾರ್ಯ ಮತ್ತು ಪಾಲನೆ ವಿಭಾಗೀಯ ಕಛೇರಿ
ಬೆವಿಕಂ, ರಾಜಾಜಿನಗರ ಬೆಂಗಳೂರು.

## ಆರೋಗ್ಯವೇ ಭಾಗ್ಯ – ಟೊಮಾಟೊ



ಇದೊಂದು ತರಕಾರಿಯೂ ಹೌದು, ಹಣ್ಣೂ ಹೌದು.

ಇಂದಿನ ದಿನಗಳಲ್ಲಿ ಟೊಮೆಟೊ ಇಲ್ಲದೆ ಅಡುಗೆಯೇ ಇಲ್ಲ ಎನ್ನುವಂತಾಗಿದೆ. ಇದರಲ್ಲಿ ಜೀವಸತ್ವಗಳು, ಲೋಹ, ಲವಣಾಂಶಗಳೂ ಹೇರಳವಾಗಿವೆ.

ಇದರ ರಸವು ಉಲ್ಲಾಸವನ್ನೂ, ತಂಪನ್ನೂ ಉಂಟು ಮಾಡುತ್ತದೆ. ದೇಹದ ಮೂಳೆಗಳನ್ನು ಬಲಪಡಿಸುತ್ತದೆ. ನೋವು ಸಂಧಿವಾತಗಳನ್ನು ನಿವಾರಿಸುತ್ತದೆ.

ಇದು ಬಹು ಬೇಗನೆ ರಕ್ತಗತವಾಗುವುದರಿಂದ ರಕ್ತನಾಳಗಳನ್ನು ಶುದ್ಧಿಗೊಳಿಸುತ್ತದೆ. ಆರೋಗ್ಯವನ್ನು ವರ್ಧಿಸುತ್ತದೆ. ಮೂತ್ರ ದೋಷಗಳನ್ನು ನಿವಾರಿಸುತ್ತದೆ. ಮುಖ ಮೈಗಳಿಗೆ ಯಥೇಚ್ಛವಾಗಿ ಲೇಪನ ಮಾಡುವುದರಿಂದ ಮೊಡವೆ ಇತ್ಯಾದಿ ಚರ್ಮ ದೋಷಗಳು ನಿವಾರಣೆಯಾಗಿ ಸೌಂದರ್ಯ ವೃದ್ಧಿಯಾಗುವುದು.

ಕಣ್ಣಿನ ದೋಷ ನಿವಾರಣೆಗೆ : 4 ಚಮಚ ಟೊಮೆಟೊ ರಸ, ಒಂದು ಚಮಚ ಜೇನು, ಅರ್ಧ ಹೋಳು ನಿಂಬೆರಸ ಬೆರೆಸಿ ಕೆಲಕಾಲದವರೆಗೆ ಸೇವಿಸಬೇಕು. ಇದರಿಂದ ಸಂಜೆಗಣ್ಣಿನ ಮಬ್ಬು ಸಹ ನಿವಾರಣೆಯಾಗುವುದು.

ಚೈತನ್ಯ, ಉಲ್ಲಾಸಕ್ಕೆ : ಅರ್ಧ ಕಪ್ಪು ಟೊಮೆಟೊ ರಸ, ಎರಡು ಚಮಚ ಸಕ್ಕರೆ, ಒಂದು ಚಿಟಿಕೆ ಉಪ್ಪು, ಒಂದು ಕಾಳು ಮೆಣಸಿನ ಪುಡಿ ಬೆರೆಸಿ, ಚೆನ್ನಾಗಿ ಕಲಕಿ ಬೇಕೆಂದಾಗಲೆಲ್ಲ ಕುಡಿಯುತ್ತಿದ್ದರೆ ದೇಹಕ್ಕೆ ಚೈತನ್ಯವೂ ಮನಸ್ಸಿಗೆ ಉಲ್ಲಾಸವೂ ಉಂಟಾಗುವುದು. ಇದರಿಂದ ದಣಿವು, ಆಯಾಸ ನಿವಾರಣೆಯಾಗುವುದು. ಜಠರವು ಶುದ್ಧಿಯಾಗುವುದು.

## ಮಾವು

ಭಾರತದಲ್ಲಿ ಮಾವಿನ ಮರಕ್ಕೆ ಮಹತ್ವದ ಸ್ಥಾನವಿದೆ. ದೇಶದ ಎಲ್ಲಾ ಕಡೆಯೂ ಮಾವು ಬೆಳೆಯುತ್ತದೆ.

ಹಬ್ಬ, ಹರಿದಿನ, ಮದುವೆ ಮುಂತಾದ ಕಾರ್ಯಗಳಲ್ಲಿ ಮಾವಿನ ತೋರಣವನ್ನು ಕಟ್ಟಿ ಸಂಭ್ರಮ ಪಡುತ್ತಾರೆ. ಜಗತ್ತಿನಲ್ಲಿ ಸಾವಿರಾರು ವಿಧದ ಮಾವುಗಳಿವೆ ಎನ್ನಲಾಗಿದೆ. ಭಾರತದಲ್ಲಿ 500ಕ್ಕೂ ಹೆಚ್ಚು ವಿಧಗಳಿವೆ ಎಂದು ಗುರುತಿಸಲಾಗಿದೆ.

ಮಾವಿನ ಹಣ್ಣನ್ನು ಹಣ್ಣುಗಳ ರಾಜ ಎಂದು ಕರೆಯುತ್ತಾರೆ. ರಸಪೂರಿ, ಬಾದಾಮಿ, ಮಲಗೋವ, ಆಪೂಸ್, ಬಂಗಾನಪಲ್ಲಿ, ರತ್ನಗಿರಿ, ಮಲ್ಲಿಕಾ, ಮಾವಿನ ಹಣ್ಣುಗಳು ರುಚಿಯಲ್ಲಿ ಶ್ರೇಷ್ಠವೆಂದು ಪರಿಗಣಿಸಲಾಗಿದೆ.

ಚಿಗುರು ಮಾವಿನಕಾಯಿಯನ್ನು ಉಪ್ಪಿನಕಾಯಿ ಹಾಕಲು ಬಳಸುತ್ತಾರೆ. ಮಿತವಾಗಿ ಹಣ್ಣುಗಳನ್ನು ತಿನ್ನುವುದರಿಂದ ಹಸಿವು ಹೆಚ್ಚಾಗುವುದು. ದೊಡ್ಡವರಿಂದ ಮಕ್ಕಳವರೆಗೆ ಮಲಬದ್ಧತೆ ನಿವಾರಣೆಗೆ ಸಹಕಾರಿಯಾಗುತ್ತದೆ.



ಹಣ್ಣುಗಳನ್ನು ತಿನ್ನುವುದಕ್ಕಿಂತ ಮುಂಚೆ ಕೆಲಕಾಲ ನೀರಿನಲ್ಲಿ ಇಟ್ಟು ತೊಳೆದು ತಿನ್ನಬೇಕು. ಬಲಿತ ಮಾವಿನ ಕಾಯಿ ಪಿತ್ತವರ್ಧಕ ಹಾಗೂ ತ್ರಿದೋಷಹರ ಎನ್ನಲಾಗುತ್ತದೆ.

ಮಾವಿನ ಮಿಡಿ ಉಪ್ಪಿನಕಾಯಿ ಬಲು ರುಚಿ ಹಾಗೂ ಜನಪ್ರಿಯವಾಗಿದೆ. ಅರಿಶಿನ, ಉಪ್ಪು, ಮಸಾಲೆ ಪದಾರ್ಥಗಳೊಂದಿಗೆ ಮಿಶ್ರಮಾಡಿ ಹಾಕಿದ ಉಪ್ಪಿನಕಾಯಿ ಇಡೀ ವರ್ಷವೆಲ್ಲಾ ಕೆಡದಂತೆ ಇಟ್ಟು ನಿತ್ಯ ಊಟದಲ್ಲಿ ಬಳಸುತ್ತಾರೆ.

## ದಿನಾಂಕ 4.5.2019 ರಂದು ಬೆವಿಕಂ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಬೆಂಗಳೂರಿನ ಅಂಬೇಡ್ಕರ್ ಭವನ ಸಭಾಂಗಣದಲ್ಲಿ ಆಚರಿಸಲಾಯಿತು

























## ಸಂಪಾದಕ ಮಂಡಳಿ

| | |
|---|---|
| **ಶ್ರೀಮತಿ ಸಿ. ಶಿಖಾ,** ವ್ಯವಸ್ಥಾಪಕ ನಿರ್ದೇಶಕರು | ಅಧ್ಯಕ್ಷರು |
| **ಶ್ರೀ ಡಾ. ಆರ್. ಸಿ. ಚೇತನ್,** ನಿರ್ದೇಶಕರು (ಹಣಕಾಸು) | ಮುಖ್ಯ ಸಂಪಾದಕರು |
| **ಶ್ರೀ ಅಶೋಕ್ ಕುಮಾರ್. ಜಿ,** ನಿರ್ದೇಶಕರು (ತಾಂತ್ರಿಕ) | ಮುಖ್ಯ ಸಂಪಾದಕರು |
| **ಶ್ರೀ ಹೆಚ್. ಎಂ. ಶಿವಪ್ರಕಾಶ್,** ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ) | ಸಂಪಾದಕರು |
| **ಶ್ರೀ ಕೆ. ಬಲರಾಮ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ನೌಕರರ ಸಂಘ | ಸದಸ್ಯರು |
| **ಶ್ರೀ ರಾಮಚಂದ್ರ ರೆಡ್ಡಿ,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ | ಸದಸ್ಯರು |
| **ಶ್ರೀ ಜಿ. ಗುರುಲಿಂಗಯ್ಯ,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಪ.ಜಾ.ತಿ ಮತ್ತು ಪ.ಪಂಗಡ ಕ್ಷೇಮಾಭಿವೃದ್ಧಿ ಸಂಘ | ಸದಸ್ಯರು |
| **ಶ್ರೀ ಎಂ. ರವೀಂದ್ರ,** ಕವಿಪ್ರನಿನಿ/ಎಸ್ಕಾಂಗಳ ಪ.ಜಾ.ತಿ. ಮತ್ತು ವರ್ಗದವರ ಅಧಿಕಾರಿಗಳ ಸಂಘ | ಸದಸ್ಯರು |
| **ಶ್ರೀ ಕುಮಾರ್ ಮುದ್ದಣ್ಣನವರ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮಾ ಇ. ಸಂಘ | ಸದಸ್ಯರು |

## ಮನವಿ

**ಬೆಸ್ಕಾಂ ಸ್ನೇಹಿ** ಗೃಹಪತ್ರಿಕೆಯಲ್ಲಿ ಪ್ರಕಟಣೆಗಾಗಿ ನಿಮ್ಮ ಅಭಿಪ್ರಾಯ, ಸಲಹೆ, ಲೇಖನ, ಕಛೇರಿಯಲ್ಲಿ ಏರ್ಪಡಿಸಿದ ಕಾರ್ಯಕ್ರಮ, ಸಮಾರಂಭಗಳ ಬಗ್ಗೆ ವರದಿಗಳು, ಅಧಿಕಾರಿ/ಸಿಬ್ಬಂದಿ ವರ್ಗದವರ ಸಾಧನೆಗಳ ಬಗ್ಗೆ ಮಾಹಿತಿಗಳನ್ನು ಕಳುಹಿಸಬೇಕಾದ

ವಿಳಾಸ: **ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.),ನಿಗಮ ಕಾರ್ಯಾಲಯ, ಬೆ.ವಿ.ಕಂಪನಿ, ಕೆ.ಆರ್. ವೃತ್ತ, ಬೆಂಗಳೂರು-560 001.**

ಇಮೇಲ್ ವಿಳಾಸ: **gmcr@bescom.co.in**

**ವಿದ್ಯುತ್ ಸಂಬಂಧಿತ ಯಾವುದೇ ಸಹಾಯಕ್ಕಾಗಿ 24 ಗಂಟೆಗಳ ಸಹಾಯವಾಣಿ: 1912**

**ಸಂದೇಶ ಕಳುಹಿಸಿ: 58888 ವೆಬ್‌ಸೈಟ್: www.bescom.org**

Printed at : Poornima Printers, Ph. 080 - 23359588